# ನಿಮ್ಮ ಅಂಗಡಿಮುಂಗಟ್ಟುಗಳನ್ನು ಕೆಲಸಗಾರರಿಗೆ ಹಾಗೂ ಗ್ರಾಹಕರಿಗೆ ಸುರಕ್ಷಿತವಾಗಿಡಲು ನೀವೇನು ಮಾಡಬೇಕು?

Indian Scientists' Response to COVID-19

**COVID-೧೯: ಭಾರತೀಯ ವಿಜ್ಞಾನಿಗಳ ಪ್ರತಿಕಿಯೆ**

https://indscicov.in/

IndiSciCovid



### ಮುನ್ನುಡಿ

ಅಗತ್ಯ ಸೇವೆಗಳಾದ ದಿನಸಿ ಮತ್ತು ಔಷಧಿ ಅಂಗಡಿಗಳನ್ನು ಕೋವಿಡ್-೧೯ರಿಂದಿರುವ ಲಾಕ್ಡೌನ್ ಅವಧಿಯಲ್ಲಿ ತೆರೆದಿಡಲು ಅನುಮತಿಯಿದೆ. ಇಂತಹ ಅಂಗಡಿಗಳಲ್ಲಿ ಜನಜಂಗುಳಿ ಹೆಚ್ಚಿರುವುದರಿಂದ ಇಲ್ಲಿ ಸೋಂಕು ಹರಡುವ ಸಾಧ್ಯತೆಗಳು ಅಧಿಕ. ಒಬ್ಬರಿಂದೊಬ್ಬರು ಅಂತರ ಕಾಯ್ದುಕೊಳ್ಳುವ ಮತ್ತು ವಸ್ತುಗಳ ಮೇಲ್ಮೈ ಆಗಾಗ್ಗೆ ಸ್ವಚ್ಛಗೊಳಿಸುವ ಸಾಮಾನ್ಯ ನಿರ್ದೇಶನಗಳನ್ನು ಪಾಲಿಸಿದರೂ, ಇಂತಹ ಅಂಗಡಿ ಮಾಲೀಕರು ಸೋಂಕು ಹರಡದಂತೆ ಕೆಲವು ನಿರ್ದಿಷ್ಟ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಈ ಕ್ರಮಗಳನ್ನು ಪಾಲಿಸುವುದರಿಂದ ನೀವು, ನಿಮ್ಮ ಕುಟುಂಬದವರು ಮತ್ತು ನಿಮ್ಮ ಸಹೋದ್ಯೋಗಿಗಳು ಈ ಮಹಾಮಾರಿಯಿಂದ ಸುರಕ್ಷಿತವಾಗಿದ್ದು, ಸಾರ್ವಜನಿಕರಿಗೆ ಅಗತ್ಯ ಸೇವೆಗಳನ್ನು ಪೂರೈಸಬಹುದು.



### ಅಂಗಡಿ ಮಾಲೀಕರಿಗೆ ಮಾರ್ಗಸೂಚಿಗಳು:

ವಿಡ್-೧೯ ಸಾಂಕ್ರಾಮಿಕವನ್ನು ತಡೆಯಲು ಸೂಚಿಸಲಾದ ಕ್ರಮಗಳಾದ ಹಸ್ತ ನೈರ್ಮಲ್ಯ ಕಾಪಾಡಿಕೊಳ್ಳುವುದು ಮತ್ತು ಕೈಯಿಂದ ಮುಖವನ್ನು ಮುಟ್ಟದಿರುವುದು ಎಲ್ಲರಿಗೂ ಅನ್ವಯಿಸುತ್ತವೆ. ಈ ಕ್ರಮಗಳನ್ನು ಅಂಗಡಿಯ ಎಲ್ಲಾ ಕೆಲಸದವರು ಪಾಲಿಸಬೇಕು. ಗ್ರಾಹಕರೊಂದಿಗೆ ವ್ಯವಹರಿಸುವಾಗ ಇವರು ಮುಖಗವಸನ್ನು ಧರಿಸುವುದು ಒಳಿತು. ಕೆಲವರು, ಹೆಚ್ಚಿನ ಸುರಕ್ಷತೆಗಾಗಿ, ಮುಂಗವಚ (ಏಪ್ರಾನ್), ಟೋಪಿ ಮತ್ತು ಕೈಚೀಲ (ಗ್ಲೋವ್ಸ್) ಗಳನ್ನು ಬಳಸುತ್ತಾರೆ.



ನೀವು, ಪಡಿತರ ಅಂಗಡಿಗಳಲ್ಲಿ ಇರುವಂತೆ, ಬಿಡಿಸಾಮಾನು ಅಥವಾ ಕಟ್ಟಿಡದ ಸಾಮಾನುಗಳನ್ನು ಮಾರುತ್ತಿದ್ದರೆ, ಗ್ರಾಹಕರಿಗೆ ಸಾಮಾನುಗಳನ್ನು ಕೊಡಲು ಒಂದು ಉದ್ದನೆಯ ಬಗ್ಗಿರುವ ಕೊಳವೆಯಂತಹ ಸಾಧನವನ್ನು ಉಪಯೋಗಿಸಬಹುದು. ಇದರಿಂದ ನೀವು ನಿಮ್ಮ ಗ್ರಾಹಕರ ನಡುವೆ ಅಂತರವನ್ನು ಕಾಯ್ದುಕೊಳ್ಳಬಹುದು.

### ನೀವು ಸೋಂಕಿನಿಂದ ಬಳಲುತ್ತಿದ್ದರೆ:

ನೀವು ಅಥವಾ ನಿಮ್ಮ ಕೆಲಸದವರು ಕೋವಿಡ್ -೧೯ ಸೋಂಕಿನ ಲಕ್ಷಣಗಳಾದ ಕೆಮ್ಮು ಅಥವಾ ಜ್ವರ ಹೊಂದಿದ್ದರೆ, ಕೆಲಸಕ್ಕೆ ರಜೆ ಹಾಕಿ. ನಿಮ್ಮ ಕೆಲಸದವರಿಗೆ ಸಂಬಳ-ಸಹಿತ ರಜೆ ಕೊಡಿ. ಇದರಿಂದ ಅಂಗಡಿಯಲ್ಲಿ ಸೋಂಕು ಇನ್ನೊಬ್ಬರಿಗೆ ಹರಡುವುದನ್ನು ತಡೆಯಬಹುದು.



### ವೈಯಕ್ತಿಕ ಮತ್ತು ಮನೆಯ ನೈರ್ಮಲ್ಯ

ದಿನವಿಡೀ ನಿಮ್ಮ ಮೇಲೆ ಕೂತಿರಬಹುದಾದ ವೈರಸ್ ಅನ್ನು ನಿಮ್ಮ ಕುಟುಂಬದವರಿಗೆ ಹರಡದಿರಲು ಮನೆಗೆ ಬಂದೊಡನೆಯೇ ಸ್ನಾನ ಮಾಡಿ.

ನೀವು ತೊಟ್ಟ ಬಟ್ಟೆಗಳನ್ನು ಒಂದು ಪ್ರತ್ಯೇಕ ಬಕೆಟಿನೊಳಗೆ ಹಾಕಿ; ಸಾಧ್ಯವಾದರೆ ತಕ್ಷಣವೇ ಸಾಬೂನಿನೊಂದಿಗೆ ಅದನ್ನು ಒಗೆಯಿರಿ.



**ದಾಸ್ತಾನು ಕೊಂಡುಕೊಳ್ಳುವುದು ಮತ್ತು ಸ್ವೀಕರಿಸುವುದು**

ಸಾರ್ವಜನಿಕ ಪ್ರದೇಶದಲ್ಲಿ ಎಲ್ಲರೂ ೧-೨ ಮೀಟರ್ ಅಂತರ ಕಾಪಾಡಿಕೊಳ್ಳುವ ನಿರ್ದೇಶನವನ್ನು ಪಾಲಿಸಬೇಕು. ಅಂಗಡಿ ಮಾಲೀಕರು ಸಾಮಾನು ಕೊಳ್ಳುವ ಸಗಟು ಮಾರುಕಟ್ಟೆಯಲ್ಲೂ ಜನರು ಸಾಕಷ್ಟು ಅಂತರ ಕಾಪಾಡಿಕೊಂಡು ಸಾಲಾಗಿ ನಿಲ್ಲುವ ವ್ಯವಸ್ಥೆ ಇರಬೇಕು. ಈ ಕೈಪಿಡಿಯಲ್ಲಿ ಅಂತಹ ದೊಡ್ಡ ಮಳಿಗೆಗಳಲ್ಲಿ ಜನರ ಓಡಾಟಕ್ಕೆ ಪಾಲಿಸಬೇಕಾದ ಕ್ರಮಗಳನ್ನೂ ವಿವರಿಸಲಾಗಿದೆ. ಇಂತಹ ಪ್ರದೇಶದಲ್ಲಿ ಮುಖಗವಸನ್ನು ಧರಿಸುವುದು ಒಳ್ಳೆಯದು. ಅಲ್ಲಿಂದ ಹೊರಬಂದಮೇಲೆ ನಿಮ್ಮ ಕೈಗಳನ್ನು ಸಾಬೂನಿನಿಂದ ತೊಳೆಯಿರಿ. ಸಾಧ್ಯವಾದಲ್ಲಿ, ಪಾವತಿಗಳಿಗಾಗಿ ಆನ್‌ಲೈನ್ ವಹಿವಾಟುಗಳನ್ನು ಬಳಸಿ.



ಸಗಟನ್ನು ನೀವು ಅಂಗಡಿಯಲ್ಲೇ ಸ್ವೀಕರಿಸುತಿದ್ದರೆ, ಅಂಗಡಿಯ ಹೊರಗೆ ಸಾಮಾನುಗಳನ್ನು ಇಳಿಸಿಕೊಳ್ಳುವುದು ಒಳಿತು. ಅಲ್ಲೇ ಪೊಟ್ಟಣಗಳಿಂದ ಇವುಗಳನ್ನು ತೆಗೆದು ಒಳತನ್ನಿ. ಸಾಧ್ಯವಾದಲ್ಲಿ ನೀವು ತೆಗೆಯಬೇಕೆಂದಿರುವ ಸಾಮಾನುಗಳಿರುವ ಡಬ್ಬಗಳನ್ನು ಬ್ಲೀಚ್ ದ್ರಾವಣದಿಂದ (೧:೧೦) ಒರೆಸಿ.

**ಸಗಟುಗಳ ಸಂಗ್ರಹಣೆ:**

ಅಕ್ಕಿ ಮತ್ತು ಬೇಳೆಯಂತಹ ಕಟ್ಟೆರದ ಸಾಮಾನುಗಳನ್ನು ಮುಚ್ಚಳವಿರುವ ಡಬ್ಬಗಳಿಗೆ ಹಾಕಿ. ಈ ಡಬ್ಬಗಳನ್ನು ಪ್ರತಿದಿನ ಒರೆಸಿ. ಹಣ್ಣು ಮತ್ತು ತರಕಾರಿಗಳನ್ನು ಹೊರಗೆ ಪ್ರದರ್ಶಿಸಿಡಬಹುದು. ಗ್ರಾಹಕರು ಅಂಗಡಿಗೆ ಬಂದಾಗ, ಅವರು ಕೊಳ್ಳುವ ಸಾಮಾನುಗಳನ್ನು ಬಿಟ್ಟು ಬೇರೆ ಏನನ್ನೂ ಮುಟ್ಟದಿರಲು ಕೋರಿ. ಹಣ್ಣು ತರಕಾರಿಗಳು ಬೇಗ ಮಾರಾಟವಾಗುವುದರಿಂದ ಇವು ಸ್ವಲ್ಪ ಸಮಯವಷ್ಟೇ ಹೊರಗಿರುತ್ತವೆ. ಇವುಗಳನ್ನು ಕೊಂಡವರು ಇವನ್ನು ಚೆನ್ನಾಗಿ ತೊಳೆದು ಸ್ವಚ್ಛಗೊಳಿಸಿ ಉಪಯೋಗಿಸಬೇಕು.

**ಸಾಮಾನುಗಳ ಮಾರಾಟ:**

ಹೊರಹೋಗುವ ಮುನ್ನ ಎಲ್ಲರೂ ಮುಖಗವಸನ್ನು ಧರಿಸಲು ಸೂಚಿಸಿದೆ. ಅಂಗಡಿಮಾಲೀಕರು ತಮ್ಮ ಗ್ರಾಹಕರಿಗೆ ಇವುಗಳನ್ನು ಉಪಯೋಗಿಸಲು ಹೇಳಬಹುದು. ಮನೆಯಲ್ಲೇ ತಯಾರಿಸಬಹುದಾದ ಮುಖಗವಸನ್ನು ಮಾಡುವ ವಿಧಿವಿಧಾನಗಳನ್ನು ಮತ್ತು ಇವುಗಳ ಪ್ರಯೋಜನವನ್ನು ಹೊಂದಿರುವ ಬಿತ್ತಿ ಪತ್ರಗಳನ್ನು ಅಂಗಡಿಯ ಗೋಡೆಯ ಮೇಲೆ ಅಂಟಿಸಬಹುದು.



ನಿಮ್ಮ ಅಂಗಡಿಯ ಗಾತ್ರದ ಅನುಸಾರ ನಿಮ್ಮ ವಹಿವಾಟನ್ನು ನಿರ್ವಹಿಸಲು ಕೆಳಕಂಡ ಕೆಲವು ಆಯ್ಕೆಗಳಿವೆ:

**ಆಯ್ಕೆ ೧: (ಸಣ್ಣ, ಒಳಾಂಗಣ ಅಂಗಡಿ)**

ನಿಮ್ಮ ಗ್ರಾಹಕರಿಗೆ ಬೇಕಾದ ಸೇವೆಗಳನ್ನು ಅಂಗಡಿಯ ಬಾಗಿಲಲ್ಲೇ ಒದಗಿಸಿ. ತ್ವರಿತವಾಗಿ ಅವರ ಸೇವೆ ಮಾಡಲು ನಿಮ್ಮ ಗ್ರಾಹಕರಿಗೆ ಬೇಕಾದ ವಸ್ತುಗಳನ್ನು ಪಟ್ಟಿಮಾಡಲು ಹೇಳಿ.

**ಆಯ್ಕೆ ೨: (ದೊಡ್ಡ, ಒಳಾಂಗಣ ಅಂಗಡಿ)**

ಅಂಗಡಿಯೊಳಗೆ ಬರುವ ಮುನ್ನ ಎಲ್ಲರಿಗೂ ತಮ್ಮ ಕೈಗಳನ್ನು ತೊಳೆಯಲು ಸೂಚಿಸಿ. ಸಾಧ್ಯವಾದಲ್ಲಿ ಬಾಗಿಲಿನಲ್ಲಿ ಒಂದು ಕೈ ತೊಳೆಯುವ ಬೋಗುಣಿಯನ್ನು (ವಾಶ್ ಬೇಸಿನ್) ಇಡಿ. ಪರ್ಯಾಯವಾಗಿ ಹ್ಯಾಂಡ್ ಸ್ಯಾನಿಟೈಸರ್ ಸಹ ಬಳಸಬಹುದು. ಕೈ ಒರೆಸಲು ಪೇಪರ್ ನಾಪ್ಕಿನ್ ಒದಗಿಸಿ, ಬಳಸಿದ ನಾಪ್ಕಿನ್ಗಳಿಗಾಗಿ ಪ್ರತ್ಯೇಕವಾದ ಕಸದ ಬುಟ್ಟಿಯನ್ನಿಡಿ. ಸಾಧ್ಯವಾದಲ್ಲಿ, ಅಂಗಡಿಯ ಬಾಗಿಲುಗಳನ್ನು ಸಂಪೂರ್ಣ ತೆರೆದಿಡಿ. ಇದರಿಂದ ಗ್ರಾಹಕರು ಒಳಗೆ ಬರುವಾಗ ಅಥವಾ ಹೊರಗೆ ಹೋಗುವಾಗ ಬಾಗಿಲಿನ ಹಿಡಿ ಅಥವಾ ಚಿಲಕವನ್ನು ಮುಟ್ಟುವಂತಿರುವುದಿಲ್ಲ. ಗಾಳಿಯಾಡಲು ಕಿಟಕಿಗಳನ್ನೂ ತೆಗೆಯಬಹುದು.

ಅಂಗಡಿಯೊಳಗೆ ಒಮ್ಮೆಗೆ ಬರುವ ಜನರ ಸಂಖ್ಯೆಯನ್ನು, ಅಂಗಡಿಯ ಗಾತ್ರಕ್ಕನುಸಾರವಾಗಿ, ಒಬ್ಬರಿಂದೊಬ್ಬರು ಸಾಕಷ್ಟು ಅಂತರವನ್ನು (೧-೨ ಮೀಟರ್) ಕಾಪಾಡಿಕೊಳ್ಳುವಂತೆ ನಿಯಂತ್ರಿಸಿ.

**ಆಯ್ಕೆ ೩: (ಹೊರಾಂಗಣ/ಸರಕು ಮಾರಾಟದ ಅಂಗಡಿ)**



ಇಂತಹ ಅಂಗಡಿಗಳಲ್ಲಿ ಜನ ಮುಟ್ಟಬಹುದಾದ ವೈರಸ್ ಇರುವಂತಹ ವಸ್ತುಗಳು ಮತ್ತು ಮೇಲ್ಮೈಗಳು ಕಡಿಮೆ. ಆದರೂ ಸಹ ಅಂಗಡಿಯ ಸುತ್ತಮುತ್ತ ಒಬ್ಬರಿಂದೊಬ್ಬರು ೧-೨ ಮೀಟರ್ ಅಂತರವನ್ನು ಕಾಪಾಡಿಕೊಳ್ಳುವಂತೆ ವ್ಯವಸ್ಥೆ ಮಾಡಿ. ನಿಮ್ಮ ಅಂಗಡಿಯ ಸುತ್ತಮುತ್ತ ಕಸವಿರದಂತೆ ನೈರ್ಮಲ್ಯವನ್ನು ಕಾಪಾಡಿ. ದಿನದ ಅಂತ್ಯದಲ್ಲಿ ಹರಡಿರುವ ಕಸವನ್ನು ಕಸದ ಬುಟ್ಟಿಯಲ್ಲಿ ತುಂಬಿಕೊಂಡು ತಕ್ಕ ಕಡೆ ಅದನ್ನು ಬಿಸಾಡಿ.

**ಸಾಲುಗಳು:**

ಪ್ರತಿಯೊಬ್ಬ ಗ್ರಾಹಕನ ಸೇವೆ ಮಾಡಲು ಸ್ವಲ್ಪ ಸಮಯವಾಗಬಹುದು. ಹಾಗಾಗಿ ಅವರಿಗೆ ೧-೨ ಮೀಟರಿನಷ್ಟು ಅಂತರ ಕಾಪಾಡಿಕೊಂಡು ಸಾಲಾಗಿ ನಿಲ್ಲಲು ಹೇಳಿ. ಅವರ ನೆರವಿಗಾಗಿ ಅಂಗಡಿಯ ಹೊರಗೆ ನೆಲದಮೇಲೆ ೧-೨ ಮೀಟರ್ ದೂರದಲ್ಲಿ ವೃತ್ತಗಳನ್ನು ಬರೆದು ಅಲ್ಲಿ ಸಾಲಾಗಿ ನಿಲ್ಲಲು ಹೇಳಿ.



ದಿನದ ಕೊನೆಯಲ್ಲಿ, ಅಂಗಡಿಯಲ್ಲಿ ಮುಟ್ಟಲ್ಪಡುವ ವಸ್ತುಗಳನ್ನು, ಮುಚ್ಚಳಗಳನ್ನು, ಮೇಲ್ಮೈಗಳನ್ನು, ಬಾಗಿಲಿನ ಹಿಡಿಗಳನ್ನು, ಶೌಚದ ನಲ್ಲಿಗಳನ್ನು, ಫ್ಲಶ್ ಮಾಡುವ ಗುಂಡಿಗಳನ್ನು ಸಾಬೂನು ನೀರಿನಿಂದ ಅಥವಾ ಬ್ಲೀಚ್ ದ್ರಾವಣದಿಂದ (೧:೧೦) ಸ್ವಚ್ಛಗೊಳಿಸಿ. ವಾಶ್ ಬೇಸಿನ್ ಮತ್ತು ಶೌಚವನ್ನು ದಿನಾಲೂ ಆದಷ್ಟು ಸಲ ಸಾಬೂನು ನೀರಿನಿಂದ ತೊಳೆದು, ಒರೆಸಿ ಬ್ಲೀಚ್ನಿಂದ ಸ್ವಚ್ಛಗೊಳಿಸಿ.



ಮರುಬಳಸಬಹುದಾದ ಟೋಪಿ, ಮುಖಗವಸು, ಏಪ್ರಾನ್ಗಳನ್ನು ಬೇರೆ ಬಟ್ಟೆಗಳಿಂದ ಬೇರ್ಪಡಿಸಿ ಪ್ರತ್ಯೇಕವಾಗಿ ಒಗೆಯಿರಿ. ಅಂಗಡಿಯಲ್ಲಿ ಕೆಲಸಮಾಡುವ ಪ್ರತಿಯೊಬ್ಬರಿಗೂ ದಿನವೂ ಒಗೆದು ಸ್ವಚ್ಛಗೊಳಿಸಿದ ಟೋಪಿ, ಮುಖಗವಸು ಮತ್ತು ಏಪ್ರಾನ್ ಒದಗಿಸಿ. ಬಳಸಿಬಿಸಾಡುವ ಟೋಪಿ, ಕೈಚೀಲ, ಮುಖಗವಸು ಮತ್ತು ಏಪ್ರಾನ್ ಗಳನ್ನು ಸರಿಯಾಗಿ ಬಿಸಾಡಬೇಕು. ಇವುಗಳನ್ನು ಬ್ಲೀಚ್ ದ್ರಾವಣದಿಂದ (೧:೧೦) ಸ್ವಚ್ಛಗೊಳಿಸಿ ನಂತರ ಸುಡಬೇಕು ಇಲ್ಲವೇ ಗುಂಡಿಯಲ್ಲಿ ಹೂಳಬೇಕು.

**ಹಣ ಪಾವತಿಗಳು:**

ಅಂಗಡಿ ಮಾಲೀಕರಾದ ನೀವು ಹಣ ಪಾವತಿಗಳನ್ನು ಸ್ವೀಕರಿಸುತಿದ್ದರೆ ನೋಟುಗಳು ಮತ್ತು ಚಿಲ್ಲರೆ ಕಾಸುಗಳನ್ನು ಹಾಕಲು ಪ್ರತ್ಯೇಕವಾದ ಡಬ್ಬವೊಂದನ್ನು ಇಟ್ಟುಕೊಳ್ಳಿ. ನೋಟುಗಳು ಹಾಗು ಚಿಲ್ಲರೆ ಕಾಸುಗಳ ಮೇಲೆ ವೈರಸ್ ಇರುವ ಸಾಧ್ಯತೆಗಳಿರುವುದರಿಂದ ಕೈಚೀಲಗಳನ್ನು ಬಳಸುವುದು ಸುರಕ್ಷಿತ. ದುಡ್ಡಿಟ್ಟ ಡಬ್ಬವನ್ನು ದಿನವೂ ಸಾಬೂನು ನೀರಿನಿಂದ ತೊಳೆಯಿರಿ. ಸಾಧ್ಯವಾದಲ್ಲಿ ನಿಮ್ಮ ಗ್ರಾಹಕರಿಗೆ ಆನ್ಲೈನ್ ಮೂಲಕ ಪಾವತಿಗಳನ್ನು ಮಾಡಲು ಹೇಳಿ. ಇಲ್ಲವಾದಲ್ಲಿ ಒಬ್ಬರನ್ನು ಹಣದ ವಾಹಿವಾಟು ಮಾಡಲು ನಿಯೋಜಿಸಿ.

**ಮನೆಮನೆಬಾಗಿಲಿಗೆ ಸಾಮಾನುಗಳ ವಿತರಣೆ**

ನೀವು ಮನೆಬಾಗಿಲಿಗೆ ಸಾಮಾನುಗಳನ್ನು ವಿತರಿಸುತಿದ್ದರೆ ಮನೆಯ ಹೊರಗೇ ನಿಂತು, ಸಾಮಾನುಗಳನ್ನು ಡಬ್ಬದೊಳಗೆ ಇಟ್ಟು, ಗ್ರಾಹಕರು ಒಳಗೆ ಕೊಂಡುಹೋಗುವಂತೆ ಹೇಳಿ. ಹಣವನ್ನು, ನೀವು ನಂತರ ಪಡೆಯಬಹುದಾದ ಇನ್ನೊಂದು ಚಿಕ್ಕ ಡಬ್ಬದೊಳಗೆ ಇಡಲು ಹೇಳಿ. ನೀವು ಚಿಲ್ಲರೆ ವಾಪಸ್ಸು ಕೊಡುತ್ತಿದ್ದರೆ ಅದೇ ರೀತಿ ಡಬ್ಬದೊಳಗೆ ಹಾಕಿ ಹಿಂದಿರುಗಿಸಿ.






**ಅಂಗಡಿಯವರು ಪಾಲಿಸಬೇಕಾದ ಸಾಮಾನ್ಯ ಮಾರ್ಗಸೂಚಿಗಳು:**

- ನಿಮ್ಮ ಕೈಗಳನ್ನು ಆಗಾಗ್ಗೆ ತೊಳೆಯಿರಿ
- ಮುಖಗವಸನ್ನು ಧರಿಸಿ
- ಸಾಬೂನು ನೀರಿನಿಂದ ಅಥವಾ ಬ್ಲೀಚ್ ದ್ರಾವಣದಿಂದ ಅಂಗಡಿಯ ಎಲ್ಲೆಡೆ, ಬಾಗಿಲುಗಳ ಹಿಡಿಗಳನ್ನು, ಮುಚ್ಚಳಗಳನ್ನು ಒರೆಸಿ
- ಮರುಬಳಸಬಹುದಾದಂತಹ ಟೋಪಿ, ಮುಖಗವಸು, ಏಪ್ರಾನ್ ಗಳನ್ನು ಪ್ರತ್ಯೇಕವಾಗಿ ಒಗೆಯಿರಿ
- ನಿಮಗೆ ಸೋಂಕಿದ್ದಲ್ಲಿ ಕೆಲಸಕ್ಕೆ ಹೋಗದೆ ರಜೆ ಹಾಕಿ
- ಮನೆಗೆ ಬಂದೊಡನೆ ಸ್ನಾನ ಮಾಡಿ
- ದಿನವಿಡೀ ಹಾಕಿದ ಬಟ್ಟೆಯನ್ನು ಪ್ರತ್ಯೇಕವಾಗಿ ಒಗೆಯಿರಿ




**ದಾಸ್ತಾನು ಕೊಂಡುಕೊಳ್ಳುವುದು ಮತ್ತು ಸ್ವೀಕರಿಸುವುದು**

- ಸಾಧ್ಯವಾದಲ್ಲಿ, ಅಂಗಡಿಯ ಹೊರಗೆ ಸಗಟುಗಳನ್ನು ಸ್ವೀಕರಿಸಿ.
- ಡಬ್ಬಗಳನ್ನು ಸಾಬೂನು ನೀರಿನಿಂದ ಅಥವಾ ಬ್ಲೀಚ್ ದ್ರಾವಣದಿಂದ (೧:೧೦) ಒರೆಸಿ
- ಸಾಮಾನುಗಳನ್ನು ಡಬ್ಬದಿಂದ ಹೊರತೆಗೆದು ಒಳತನ್ನಿ

**ಸರಕುಗಳ ಸಂಗ್ರಹಣೆ:**

- ಅಕ್ಕಿ ಮತ್ತು ಬೇಳೆಯಂತಹ ಕಟ್ಟಿರದ ಸಾಮಾನುಗಳನ್ನು ಮುಚ್ಚಳವಿರುವ ಡಬ್ಬಗಳಲ್ಲಿ ಸಂಗ್ರಹಿಸಿ.
- ಈ ಡಬ್ಬಗಳನ್ನು ಪ್ರತಿದಿನವೂ ಒರೆಸಿ
- ಹಣ್ಣು ತರಕಾರಿಗಳನ್ನು ಹೊರಗೆ ಇಡಬಹುದು

**ಸಾಮಾನುಗಳ ಮಾರಾಟ:**

- ಚಿಕ್ಕ, ಒಳಾಂಗಣ ಅಂಗಡಿಯಿದ್ದರೆ ಗ್ರಾಹಕರೊಂದಿಗೆ ಬಾಗಿಲಲ್ಲೇ ವ್ಯಾಪಾರ ಮಾಡಿ
- ದೊಡ್ಡ, ಒಳಾಂಗಣ ಅಂಗಡಿಯಲ್ಲಿ ಗ್ರಾಹಕರಿಗೆ ಬಾಗಿಲಲ್ಲೇ ಕೈ ತೊಳೆದು ಒಳಬರುವಂತೆ ಸೂಚಿಸಿ ಮತ್ತು ಒಮ್ಮೆಗೆ ಒಳಗಿರುವ ಗ್ರಾಹಕರ ಸಂಖ್ಯೆಯನ್ನು ನಿಯಂತ್ರಿಸಿ.
- ಹೊರಗಿರುವ ಅಥವಾ ಸಗಟು ವ್ಯಾಪಾರದ ಅಂಗಡಿಯಲ್ಲಿ ಗ್ರಾಹಕರು ಒಬ್ಬರಿಂದೊಬ್ಬರು ೧-೨ ಮೀಟರ್ ಅಂತರವನ್ನು ಕಾಪಾಡಿಕೊಳ್ಳುವಂತೆ ಸೂಚಿಸಿ
- ಅಂಗಡಿಯ ಹೊರಗೆ ಪಾದಚಾರಿ ಮಾರ್ಗದಲ್ಲಿ ೧-೨ ಮೀಟರ್ ದೂರದ ವೃತ್ತಗಳನ್ನು ಬರೆದು ಗ್ರಾಹಕರಿಗೆ ಅಲ್ಲಿ ಸಾಲಿನಲ್ಲಿ ನಿಲ್ಲು ವಂತೆ ಹೇಳಿ

**ಹಣ ಪಾವತಿಗಳು:**



- ದುಡ್ಡು ಮತ್ತು ಚಿಲ್ಲರೆಯನ್ನು ಪ್ರತ್ಯೇಕವಾದ, ದಿನವೂ ಸಾಬೂನು ನೀರಿನಿಂದ ಸ್ವಚ್ಛಗೊಳಿಸುವ ಡಬ್ಬಗಳಲ್ಲಿಡಿ
- ಸಾಧ್ಯವಾದಲ್ಲಿ, ಒಬ್ಬ ಕೆಲಸಗಾರರನ್ನು ಹಣದ ವಾಹಿವಾಟನ್ನು ಮಾಡಲು ನೇಮಿಸಿ ಅಥವಾ ಗ್ರಾಹಕರಿಗೆ ಆನ್ಲೈನ್ ಪಾವತಿ ಮಾಡಲು ಪ್ರೋತ್ಸಾಹಿಸಿ

**ಮನೆಬಾಗಿಲಿಗೆ ಸಾಮಾನು ವಿತರಣೆ** :

- ಗ್ರಾಹಕರ ಮನೆಯನ್ನು ಪ್ರವೇಶಿಸದೆ ಹೊರಗೆ ಡಬ್ಬದಲ್ಲಿ ಸಾಮಾನುಗಳನ್ನಿಡಿ.
- ಹಣವನ್ನು ವಿತರಣೆಯ ಡಬ್ಬದ ಜೊತೆಗಿಟ್ಟ ಇನ್ನೊಂದು ಡಬ್ಬದಲ್ಲಿ ಪಡೆಯಿರಿ.

ಇಲ್ಲಿ ಪ್ರಸ್ತುತಪಡಿಸಿರುವ ಮಾಹಿತಿಯನ್ನು ವೈಜ್ಞಾನಿಕವಾಗಿ ನಿಖರವಾಗಿರಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ. ಆದಾಗ್ಯೂ ತಪ್ಪುಗಳು ಕಂಡಲ್ಲಿ ನಮಗೆ ದಯವಿಟ್ಟು ಇಮೇಲ್ ಮೂಲಕ ಇಲ್ಲಿ ತಿಳಿಸಿ: indscicov@gmail.com